



ನಡೆಯುತ್ತಿರುತ್ತದೆ...'

ಈ ಸಲಹೆ ಹರಿಲಾಲನ ಮನಸ್ಸಿಗೆ ಸಿಹಿ ತಿನಿಸಿನಂತೆ ರುಚಿಸಿತು. ಕೆಲವು ದಿನಗಳಿಂದ ಹೊಸ ಸ್ನೇಹಿತರು ಅವನನ್ನು ಸುತ್ತುವರೆದಿದ್ದರು. ಇದರಿಂದಲೂ ಅವನ ಮನಸ್ಸಿನಲ್ಲಿ ಉತ್ಸಾಹದ ಸಂಚಾರವಾಯಿತು. ಅವನು ಕೂಡಲೇ ಕಂಪನಿಯ ಸ್ಥಾಪನೆಗೆ ಸಂಬಂಧಿಸಿದಂತೆ ಕಾನೂನು ಪ್ರಕ್ರಿಯೆಗಳನ್ನು ಆರಂಭಿಸಿದ. ಮತ್ತೆ ಕೆಲವೇ ದಿನಗಳಲ್ಲಿ ಕಂಪನಿಯ ಹೆಸರನ್ನು ನಿರ್ಧರಿಸಿ, ಅದರ ನೋಂದಣಿಯನ್ನೂ ಮಾಡಿಸಿದ. 'ಆಲ್ ಇಂಡಿಯಾ ಸ್ಟೋರ್ಸ್ ಲಿಮಿಟೆಡ್' ಎಂಬ ಪಬ್ಲಿಕ್ ಇಶ್ಯೂಗಾಗಿ ಶೇರನ್ನು ಮಾರ್ಕೆಟ್‌ಗೆ ಬಿಟ್ಟ. ತಾನೂ ಸಹ ಕಂಪನಿಯ ಒಬ್ಬ ಡೈರೆಕ್ಟರ್ ಆದ. ಹೊಸ ಸ್ನೇಹಿತರಲ್ಲಿ ಒಂದಿಬ್ಬರಿಗೂ ಸಹ ಡೈರೆಕ್ಟರ್ ಆಗಿ ನೇಮಿಸಿಕೊಂಡ. ನಿಂತು ಹೋಗಿದ್ದ 'ಸತ್ಯಾಗ್ರಹಿ ಬ್ರದರ್ಸ್' ನಲ್ಲಿಯೇ ಹೊಸ ಕಂಪನಿಯ ಕಚೇರಿಯನ್ನು ತೆರೆಯಲಾಯಿತು.

'ಸತ್ಯಾಗ್ರಹಿ ಬ್ರದರ್ಸ್' ಕಚೇರಿ ಜಾಗದ ಬಾಡಿಗೆಯನ್ನು ದೀರ್ಘ ಸಮಯದಿಂದ ಕೊಟ್ಟಿರಲಿಲ್ಲ; ಮನೆಯ ಮಾಲೀಕ ನಿರಂತರವಾಗಿ ಬಾಡಿಗೆ ಕೊಡುವಂತೆ ತಗಾದೆ ಮಾಡುತ್ತಿದ್ದ, ಆದರೆ ಹರಿಲಾಲ ಕೊಡುವುದಾಗಿ ಭರವಸೆಯನ್ನಷ್ಟೇ ಕೊಡುತ್ತಿದ್ದ. ಹರಿಲಾಲ ಚಳವಳಿಯ ಮಾರ್ಗದಲ್ಲಿ ಸಾಗಿದ್ದ, ಹೀಗಾಗಿ ಮನೆಯ ಮಾಲೀಕ ಬಾಡಿಗೆಯನ್ನು ಕೊಡುವಂತೆ ಆಗ್ರಹಿಸುತ್ತಿದ್ದ. ಹೋರಾಟದಲ್ಲಿ ಭಾಗವಹಿಸಿದ್ದವರ ಬಗ್ಗೆ ಏನೂ ಹೇಳುವಂತಿರಲಿಲ್ಲ. ಮಾಲೀಕನಿಗೆ ತನ್ನ ಹಣ ವಸೂಲಿಯ ಬಗ್ಗೆ ಸದಾ ಚಿಂತೆ ಕಾಡುತ್ತಿತ್ತು. ಈ ನಡುವೆ 'ಆಲ್ ಇಂಡಿಯಾ ಸ್ಟೋರ್ಸ್ ಲಿಮಿಟೆಡ್' ಹೆಸರಿನ ಹೊಸ ಕಂಪನಿಯ ಉದ್ಘಾಟನೆಯಾಯಿತು, ಆಗ ಮಾಲೀಕನಿಗೆ ಸ್ವಲ್ಪ ಧೈರ್ಯ ಬಂತು.

ಹೊಸ ಕಂಪನಿಯ ಆರಂಭ ವಿಜೃಂಭಣೆಯಿಂದ ನಡೆಯಿತು. ಅವನೊಂದಿಗಿದ್ದ ಸ್ನೇಹಿತರ ಕೆಲಸ, ಹರಿಲಾಲನ ಹೆಸರಿನಲ್ಲಿ ಶೇರು ಮಾರಾಟ ಮಾಡುವುದಷ್ಟೇ ಆಗಿತ್ತು. ಹರಿಲಾಲ ಆದಷ್ಟು ಶೀಘ್ರ ಹಣ ಸಂಪಾದನೆ ಮಾಡುವ ಬಗ್ಗೆ ಯೋಚಿಸುತ್ತಿದ್ದ. ಅವನ ಇದುವರೆಗಿನ ಅನುಭವಗಳು ಕಹಿಯಾಗಿದ್ದವು. ತಾನು ತನ್ನ ಕಾಲ ಮೇಲೆ ನಿಲ್ಲಬಲ್ಲೆ ಎಂಬ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಬೇಕಿತ್ತು. ಅಲ್ಲದೆ, ತಾನು ಹಣವನ್ನು ಗಳಿಸಬಲ್ಲೆ ಎಂಬುದನ್ನು ಸಹ ಸಾಬೀತುಪಡಿಸಲು ಉತ್ಸುಕನಾಗಿದ್ದ. ಇದುವರೆಗೆ ಅವನು ಕಂಡಿದ್ದ ಅಸಫಲತೆಗಳಿಂದಾಗಿ ಅವನ ಧೈರ್ಯ ಹಾಗೂ ದೂರದೃಷ್ಟಿಯ ಮೇಲೆ ಆಘಾತವುಂಟಾಗಿತ್ತು.

***

ಕಂಪನಿಯ ಶೇರುಗಳು ಮಾರ್ಕೆಟ್‌ಗೆ ಬರುತ್ತಲೇ, ಅವುಗಳ ಮಾರಾಟದಿಂದ ಹಣವೂ ಹರಿದು ಬರಲಾರಂಭಿಸಿತು. ಮುಸಲ್ಮಾನ ಸ್ನೇಹಿತ ರಾವಲಪಿಂಡಿ ಮತ್ತು ಅಮೃತಸರದಲ್ಲಿ ತನ್ನ ಪರಿಚಯಸ್ಥರಿದ್ದಾರೆ ಎಂದು ಹೇಳಿದ್ದ. ಅವನು ರಾವಲಪಿಂಡಿಯಲ್ಲಿ ಶೇರನ್ನು ಭರ್ಜರಿಯಾಗಿ ಮಾರಿದ. ಹರಿಲಾಲ ಕಂಪನಿಯ ಡೈರೆಕ್ಟರ್ ಆಗಿದ್ದ; ಈ ಬಗ್ಗೆ ಜನರಿಗೆ ಕುತೂಹಲವಿತ್ತು, ಅದರೊಂದಿಗೆ ಅವನ ಸುಖಕರ ಭವಿಷ್ಯದ ಬಗ್ಗೆ ಎಲ್ಲರಿಗೂ ಭರವಸೆಯಿತ್ತು. ಇದಕ್ಕೆ ಕಾರಣವಿತ್ತು; ದಲ್ಲಾಳಿಗಳು ಶೇರನ್ನು ಮಾರುವಾಗ, ಮಾತಿನ ಮಧ್ಯೆ ಹರಿಲಾಲ, ಬಾಪೂ ಅವರ ಪುತ್ರನೆಂದು ಹೇಳಿದ್ದರು. ಬಾಪೂ ಅವರ ಹೆಸರಿನ ಲಾಭ ಹರಿಲಾಲನಿಗೆ ಲಭಿಸುತ್ತಿತ್ತು. ಅವನಿಗಿಂತಲೂ ಹೆಚ್ಚು ಲಾಭವನ್ನು ದಲ್ಲಾಳಿಗಳು ಮತ್ತು ಕಂಪನಿಯ ಹೆಸರಿನಲ್ಲಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವ, ಬೆಲ್ಲದ ಹಿಂದೆ ಇರುವೆಗಳಂತೆ ಹಿಂಬಾಲಿಸುವ ಜನರೂ ಪಡೆಯುತ್ತಿದ್ದರು. ಹರಿಲಾಲ 'ಸತ್ಯಾಗ್ರಹಿ ಬ್ರದರ್ಸ್' ಬೋರ್ಡನ್ನು ತೆಗೆದು, ಅದರ ಜಾಗದಲ್ಲಿ 'ಆಲ್ ಇಂಡಿಯಾ ಸ್ಟೋರ್ಸ್ ಲಿಮಿಟೆಡ್' ಬೋರ್ಡನ್ನು ಹಾಕಿಸಿದ. ಜನ ಶೇರನ್ನು ಖರೀದಿಸಿದಂತೆ, ನಗದು ಹಣ ಕೈಗೆ ಬರಲಾರಂಭಿಸಿತು. ಈ ಆದಾಯ ಒಂದು ಮಾರ್ಗದಿಂದ ಒಳಗೆ ಬಂದರೆ, ಇನ್ನೊಂದು ಮಾರ್ಗದಿಂದ ಹೊರಗೆ ಹೋಗುತ್ತಿತ್ತು.

ಹೊಸ ಸ್ನೇಹಿತರೊಂದಿಗೆ ಸಾರಾಯಿ ಕೂಟಗಳು ಮತ್ತು ವೇಶ್ಯೆಯರ ಗಲ್ಲಿಗಳಿಗೆ ಹೋಗುವುದು ಹೆಚ್ಚಿತು. ಬೆಳಿಗ್ಗೆ ಎದ್ದಾಗ ನಶೆ ಇಳಿದು ಹರಿಲಾಲ ನಿಶ್ಶೇಷನಾಗುತ್ತಿದ್ದ. ಗುಲಾಬಳ ಭಾವಚಿತ್ರವನ್ನು ನೋಡುವುದು ಕಷ್ಟವಾಗುತ್ತಿತ್ತು. ತಡಬಡಿಸುವ ಹೆಜ್ಜೆಗಳನ್ನು ಹಾಕುತ್ತಾ ಕಚೇರಿಗೆ ಹೋಗುತ್ತಿದ್ದ. ಆದರೆ ರಾತ್ರಿಯಾದಾಗ, ಆ ಬೆಳಕು ಕತ್ತಲಿನ ಮೋಹಕ ಮಿಲನದ ವೇಳೆಯಲ್ಲಿ ಹರಿಲಾಲನ ಕಣ್ಣುಗಳಲ್ಲಿ ಕಾಂತಿ ಸೂಸುತ್ತಿತ್ತು. ಬ್ಯಾರಿಸ್ಟರ್ ಆಗುವ, ವಿದೇಶಕ್ಕೆ ಹೋಗುವ ಅಪೂರ್ಣ ಆಸೆಯಿಂದ ಹಿಡಿದು, ಗುಲಾಬಳ ಅಕಾಲಿಕ ಸಾವು ಹಾಗೂ ಬಾಪೂ ಅವರು ಮಣಿಲಾಲನಿಗೆ ವಿಧಿಸಿದ ಶಿಕ್ಷೆ ಈ ಎಲ್ಲಾ ಪ್ರಸಂಗಗಳು ಅವನನ್ನು ಘೇರಾಯಿಸುತ್ತಿದ್ದವು. ಇವೆಲ್ಲದರಿಂದ ಮುಕ್ತಿಯನ್ನು ಪಡೆಯಲು ತವಕಿಸುತ್ತಿದ್ದ ಹರಿಲಾಲ ಮತ್ತೊಮ್ಮೆ ಮದ್ಯದ ಬಾಟಲಿಯನ್ನು ಆಶ್ರಯಿಸುತ್ತಿದ್ದ. ಪ್ರತಿಯೊಂದು ಮುಂದಿನ ರಾತ್ರಿ ಕಳೆದ ರಾತ್ರಿಯಂತೆಯೇ ಇರುತ್ತಿತ್ತು.

## ಇಪ್ಪತ್ತಾರು

ಡಿಸೆಂಬರ್ ತಿಂಗಳ ಮೂಳೆಗಳನ್ನು ನಡುಗಿಸುವ ಚಳಿ ಮತ್ತು ದಟ್ಟ ಮಂಜಿನಿಂದಾಗಿ ಕಲ್ಕತ್ತಾ ನಗರ ಥರಥರ ಕಂಪಿಸುತ್ತಿತ್ತು. ಇಂಥ ಚಳಿ ಕಲ್ಕತ್ತಾಕ್ಕೆ ಹೊಸದೇನಾಗಿರಲಿಲ್ಲ. ಆದರೆ ಈ ಬಾರಿಯ ಚಳಿಯಲ್ಲಿ ಒಂದು ವಿಶೇಷವಾದ ಆವೇಗ ಕಲೆತಿತ್ತು. ಈ ಆವೇಗ ಜನಸಮೂಹದಲ್ಲಿ ಅಸಹಕಾರ ಚಳವಳಿಯನ್ನು ಮಾಡಲೋಸುಗ ಹೊರ ಹೊಮ್ಮಿತ್ತು. ಬಾಪೂ ಅವರು ದೇಶವ್ಯಾಪಿ ಅಸಹಕಾರ ಚಳವಳಿಯ ಕಹಳೆಯನ್ನು ಊದಿದ್ದರು, ಅದು ಎಲ್ಲೆಡೆಗೂ ವ್ಯಾಪಿಸಿತ್ತು. ಶಾಲೆ, ಕಾಲೇಜು, ಸರ್ಕಾರಿ ಕಚೇರಿಗಳು, ವ್ಯಾಪಾರ ಉದ್ಯೋಗ ಎಲ್ಲವೂ ಸುಮಾರಾಗಿ ಮುಚ್ಚಿದ್ದವು. ಕಲ್ಕತ್ತಾದಲ್ಲಿ ಬಾಪೂ ಅವರು ಕೆಲವು ತಿಂಗಳ ಹಿಂದೆಯಷ್ಟೇ ಈ ರಣಭೇರಿಯನ್ನು ಬಾರಿಸಿದ್ದರು. ಇಂಥ ಪರಿಸ್ಥಿತಿಯಲ್ಲಿ ಕಲ್ಕತ್ತಾ ಈ ಚಳವಳಿಯಿಂದ ಹಿಂದುಳಿಯಲು ಹೇಗೆ ಸಾಧ್ಯವಿತ್ತು? ಖಿಲಾಫತ್‌ನ ಧಾರ್ಮಿಕ ಚಳವಳಿಗೆ ಬಾಪೂ ಅವರ ಹಾಗೂ ಅವರ ಮಾಧ್ಯಮದಿಂದ ಕಾಂಗ್ರೆಸ್‌ನ ಸಮರ್ಥನೆ ಲಭಿಸಿತ್ತು. ಹೀಗಾಗಿ ಕಲ್ಕತ್ತಾದ ಮುಸಲ್ಮಾನರ ಒಂದು ದೊಡ್ಡ ವರ್ಗ ಸಹ ಈ ಅಸಹಕಾರ ಚಳವಳಿಯಲ್ಲಿ ಸೇರಿತ್ತು. ಹರಿಲಾಲ ಈ ಮೊದಲೇ ಹೋರಾಟದ ಸೂಚಿಯಲ್ಲಿ ತನ್ನ ಹೆಸರನ್ನು ಬರೆಯಿಸಿದ್ದ. ಅಲ್ಲದೆ ಈಗ 'ಆಲ್ ಇಂಡಿಯಾ ಸ್ಟೋರ್ಸ್ ಲಿಮಿಟೆಡ್' ನ ಅವನ ಹೊಸ ವ್ಯಾಪಾರದಲ್ಲಿ ಸಹ ಮುಸಲ್ಮಾನ ಸಂಗಡಿಗರೇ ಇದ್ದರು. ಆ ಸ್ನೇಹಿತರು ಹರಿಲಾಲನನ್ನು ಖಿಲಾಫತ್ ಚಳವಳಿಗೆ, ಖಿಲಾಫತ್ ಕಮಿಟಿಯ ಕಚೇರಿಗೆ ಕರೆದೊಯ್ಯುತ್ತಿದ್ದರು. ಖಿಲಾಫತ್ ಚಳವಳಿಯ ಆ ಕಚೇರಿ ಒಂದು ಮಸೀದಿಯಲ್ಲಿತ್ತು. ಮಸೀದಿಯಲ್ಲಿ ಸೇರುವ ಖಿಲಾಫತ್ ಚಳವಳಿಗಾರರೊಂದಿಗೆ ಹರಿಲಾಲ ಸಹ ತನ್ನ ಸ್ನೇಹಿತರೊಂದಿಗೆ ನಿಲ್ಲುತ್ತಿದ್ದ. ದೇಶವ್ಯಾಪಿ ಚಳವಳಿಯನ್ನು ಆರಂಭಿಸಿದ್ದ ಬಾಪೂ ಅವರ ಮಗ ಸಹ ನಮ್ಮೊಂದಿಗಿದ್ದಾನೆ ಎಂಬುದನ್ನು ತಿಳಿದು ಗುಂಪಿನಲ್ಲಿ ಉತ್ಸಾಹ ಚಿಮ್ಮುತ್ತಿತ್ತು. ಖಿಲಾಫತ್‌ನ ಚಟುವಟಿಕೆಗಳಿಗೆ ಸ್ಥಳೀಯ ಕಾಂಗ್ರೆಸ್‌ನ ಸಮರ್ಥನೆಯೂ ಸಹ ಸಿಕ್ಕಿತ್ತು. ಈ ಎಲ್ಲದರ ನಡುವೆಯೂ ಹರಿಲಾಲ ಪ್ರತ್ಯೇಕವಾಗಿ ಕಾಣ ಬರುತ್ತಿದ್ದ.

ಶುಕ್ರವಾರದ ನಮಾಜಿನ ನಂತರ, ಸೇರಿದ್ದ ಜನರೆದುರು ಬೇರೆ ಬೇರೆ ಮುಖಂಡರು ಚಳವಳಿಯನ್ನು ಮುಂದುವರೆಸಲು ಸ್ಫೂರ್ತಿದಾಯಕ ಭಾಷಣಗಳನ್ನು ಮಾಡುತ್ತಿದ್ದರು. ಆಗಲೇ ಸ್ನೇಹಿತನೊಬ್ಬ ಹರಿಲಾಲನಿಗೆ ಹೇಳಿದ

'ಹರಿಲಾಲ, ನಿನ್ನ ಹೆಸರ ಪರಿಚಯ ಎಲ್ಲರಿಗೂ ಇದೆ, ನೀನೂ ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದರೆ ಚಳವಳಿಗೆ ಮತ್ತೂ ಕಾವು ಬರುತ್ತದೆ.'

ಭಾಷಣ ಮಾಡುವ ಅಭ್ಯಾಸ ತಪ್ಪಿ ಅನೇಕ ವರ್ಷಗಳಾಗಿದ್ದವು. ಆಫ್ರಿಕಾದ ಹೋರಾಟದಲ್ಲಿ ಅವನು ಚಿಕ್ಕ ಗಾಂಧಿಯಾಗಿ ಭಾಷಣ ಮಾಡಿದ್ದು, ಈಗ ನೆನಪಿಗೆ ಬಂತು. ಆ ಕ್ಷಣಗಳು ಪ್ರೇರಣಾದಾಯಕವಾಗಿದ್ದವು. ಅವನನ್ನು ಬಂಧಿಸಿದ ನಂತರ ಜನಸಮೂಹ ಅವನಿಗೆ ಮುಗಿಲು ಮುಟ್ಟುವಂತೆ ಜಯಕಾರವನ್ನು ಹಾಕಿತ್ತು; ಆ ಜಯಘೋಷಣೆ ಈಗಲೂ ಅವನ ಕಿವಿಗಳಲ್ಲಿ ಮೊಳಗುತ್ತಿರುವಂತೆ ಭಾಸವಾಯಿತು. ಹರಿಲಾಲ ಮಸೀದಿಯಲ್ಲಿ ಸೇರಿದ್ದ ಜನಸಮೂಹವನ್ನು ನೋಡಿದ, ಆಫ್ರಿಕಾದ ಪತ್ರಿಕೆಗಳು ಆ ದಿನಗಳಲ್ಲಿ ಅವನಿಗೆ, 'ಚಿಕ್ಕ ಗಾಂಧಿ' ಎಂದು ಗೌರವವನ್ನು ಕೊಟ್ಟಿದ್ದವು. ಇಂಥ ಸನ್ಮಾನ ಬಹುಶಃ ಹಿಂದೂಸ್ತಾನದ ಯಾವುದೇ ಪತ್ರಿಕೆ ಕೊಟ್ಟಿರಲಿಲ್ಲ. ಅಕಸ್ಮಾತ್ ಹರಿಲಾಲನ ಮನಸ್ಸಿಗೆ ಏನೋ ಹೊಳೆಯಿತು. ಈಗ ಆ ಸಮಯಾವಕಾಶ ಎದುರಿಗೇ ಇದೆ; ದೇಶದ ಪತ್ರಿಕೆಗಳೂ ತನ್ನೆಡೆಗೆ ಗಮನ ಕೊಡಬೇಕಾಗುವುದು. ಹರಿಲಾಲ ಇನ್ನೂ ಆ ಚಿಂತೆಯಲ್ಲಿಯೇ ಇದ್ದ; ಆಗಲೇ ಆ ಸ್ನೇಹಿತ ಸಾರ್ವಜನಿಕ ಸಭೆಯಲ್ಲಿ ಘೋಷಣೆ ಮಾಡಿದ

'ಮಹಾತ್ಮಾ ಗಾಂಧಿಯವರ ಪುತ್ರರಾದ ಮಿಸ್ಟರ್ ಹರಿಲಾಲ್ ಗಾಂಧಿಯವರು ಈಗ ನಮ್ಮೆದುರು